**ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು**

**ಎಸ್.ಸಿ. ಕೇಸ್ ಸಂಃ 243/2025**

ಪಿರ್ಯಾದಿ ಃ ಕರ್ನಾಟಕ ರಾಜ್ಯ ಸರ್ಕಾರ
ಕುವೆಂಪುನಗರ ಪೋಲೀಸ್ ಠಾಣೆಯ
ಠಾಣಾಧಿಕಾರಿಯಿಂದ ಪ್ರತಿನಿಧಿಸಲ್ಪಟ್ಟಿದೆ.

ಃ ವಿರುದ್ಧ ಃ

ಆರೋಪಿತರು 5. ದೂರ್ ಸಿಂಗ್

**ದೋಷಾರೋಪಣೆ**

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ **ಶ್ರೀ ಡಿ.ಪುಟ್ಟಸ್ವಾಮಿ,** ನಾನು ಈ ಕೆಳಕಂಡ ಆರೋಪಿತರಾದ

5. ದೂರ್ ಸಿಂಗ್ , ವರ್ಷ, ವಾಸಃ ಕರಡಿ ಗಾವ್ ಗ್ರಾಮ, ದಾಹೊದ್, ಗುಜರಾತ್.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ಮೊದಲನೆಯದಾಗಿ ದಿಃ 22.07.2021 ರಂದು ಕುವೆಂಪುನಗರ ಪೋಲೀಸ್ ಠಾಣೆ ವ್ಯಾಪ್ತಿಯ ಚಾಸಾ–1 ರವರಿಗೆ ಸೇರಿದ ಶ್ರೀರಾಮಪುರ 2 ನೇ ಹಂತ, ಭವ್ಯ ಭಾರತ ಬಡಾವಣೆಯ ಹಿಂಭಾಗದಲ್ಲಿರುವ ಪ್ರೇಮ ಲೇಔಟ್ ನ ಮನೆ ನಂ.7 ಕ್ಕೆ ರಾತ್ರಿ ಸಮಯದಲ್ಲಿ, 5 ನೇ ಆರೋಪಿಯಾದ ನೀವು ಸದರಿ ಪ್ರಕರಣದಿಂದ ಪ್ರತ್ಯೇಕಿಸಲ್ಪಟ್ಟ ಇತರೆ 1 ರಿಂದ 4, 6, ಮತ್ತು 7 ನೇ ಆರೋಪಿತರ ಜೊತೆ ಸೇರಿ, ಮನೆಯ ಮುಂಭಾಗಿಲನ್ನು ಕಬ್ಬಿಣದ ರಾಡಿನಿಂದ ಮೀಟಿ ಹೊಡೆದು, ಮನೆಯೊಳಗೆ ನುಗ್ಗಿ ಕಳ್ಳತನ ಮಾಡುವ ಉದ್ದೇಶದಿಂದ ಗೃಹಾತಿಕ್ರಮಣ ಮಾಡಿದ್ದು, ಈ ಮೂಲಕ 5 ನೇ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 457 ರ ಅಡಿ ಶಿಕ್ಷಾರ್ಹ

ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಎರಡನೆಯದಾಗಿ, ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, 5 ನೇ ಆರೋಪಿಯಾದ ನೀವು ಸದರಿ ಪ್ರಕರಣದಿಂದ ಪ್ರತ್ಯೇಕಿಸಲ್ಪಟ್ಟ ಇತರೆ 1 ರಿಂದ 4, 6, ಮತ್ತು 7 ನೇ ಆರೋಪಿತರ ಜೊತೆ ಸೇರಿ, ಸದರಿ ಮನೆ ನಂ.7 ರಲ್ಲಿಟ್ಟಿದ್ದ ಚಾಸಾ-1 ರವರ ನಗದು ಹಣ ರೂ.3,80,000/- ಗಳನ್ನು ಹಾಗೂ ಸುಮಾರು ರೂ.5,40,000/- ಮೌಲ್ಯ ಬೆಲೆಬಾಳುವ 120 ಗ್ರಾಂ ತೂಕದ ವಿವಿಧ ಚಿನ್ನಾಭರಣಗಳನ್ನು ಕಳ್ಳತನ ಮಾಡಿಕೊಂಡು ಹೋಗಿದ್ದು, ನಂತರ 8 ನೇ ಆರೋಪಿತನಿಗೆ ಸದರಿ ಚಿನ್ನಾಭರಣಗಳನ್ನು ಮಾರಾಟ ಮಾಡಿದ್ದು, ಈ ಮೂಲಕ 5 ನೇ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 380 ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಈ ಮೇಲ್ಕಂಡ ಆರೋಪಗಳಡಿ ನೀವು ನನ್ನಿಂದ ಅಧಿವಿಚಾರಣೆಗೊಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಡಿ.ಪುಟ್ಟಸ್ವಾಮಿ)

ದಿಃ 23.03.2026

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.